ಆಸ್ಪತ್ರೆಯಿಂದ ಕಾಲೆಳೆದುಕೊಂಡು ಈಚೆ ಬರುವಾಗಲೇ ಈ ಮನುಷ್ಯ ಕಾಣಬೇಕೆ! ಮನದಲ್ಲಿ ಕಾರಂಜಿ ಚಿಮ್ಮಿದ ಅನುಭವವೇನಾಗದಿದ್ದರೂ ನಡಿಗೆಯಲ್ಲಿ ಒಂತರಾ ಜಿಗಿತ. ಆತ ಮೆಡಿಕಲ್ ಸ್ಟೋರ್‌ನಲ್ಲಿ ಔಷಧಿ ಕೊಳ್ಳುವವರ ಸಾಲಲ್ಲಿ ನಿಂತಿದ್ದ. ನನ್ನನ್ನೇನು ನೋಡಿರಲಿಕ್ಕಿಲ್ಲ. ಮಾತನಾಡಿಸದೆ ಹೋಗಿ ಬಿಡಬಹುದಿತ್ತಾದರೂ ಅದೇಕೋ ಮನಸೊಪ್ಪಲಿಲ್ಲ. ಮಾತುಕತೆಯಾಡಿ ಈಗ ಆಗಬೇಕಾದ್ದೇನಿದೆ ಎಂಬ ತರ್ಕವು ಕಾಡಿದರೂ ಅವನ ಬಗ್ಗೆ ತಿಳಿಯುವ ಕುತೂಹಲ ಒಂದಿತ್ತಲ್ಲ. ಬಳಿಯಲ್ಲಿದ್ದ ಸಿಂಕ್ ಬಳಿ ಹೋಗಿ ಕನ್ನಡಿಯಲ್ಲಿ ಮುಖ ನೋಡಿಕೊಂಡೆ. ಕೆದರಿದ್ದ ತಲೆಗೂದಲನ್ನು ಬೆರಿಗೈಯಿಂದಲೇ ಒಪ್ಪಮಾಡಿಕೊಂಡೆ. ನಗು ಬರಿಸಿಕೊಂಡೆ. ಸಹಜವಾದ ಕೆನೆಹಾಲಿನ ಮೈಬಣ್ಣ, ಬಟ್ಟಲುಗಣ್ಣುಗಳು ಕಂದಿಲ್ಲವಾದರೂ ತುಂಬಿದ ಗಲ್ಲಗಳು ಮಾತ್ರ ಒಂದಿಷ್ಟು ಸೊರಗಿವೆ ಅನ್ನಿಸಿತು. ಈಗಲೂ ನನ್ನ ಸೌಂದರ್ಯ ಒಂದಿನಿತೂ ಮುಕ್ಕಾಗಿಲ್ಲವೆಂಬ ಭರವಸೆಯನ್ನಂತೂ ಕನ್ನಡಿ ಒಡಮೂಡಿಸಿತು. ನಾನು ಕೂಡ

